**Akashvani : Bangalore**
**National Bulletin In Kannada**
**03.02.2025 / 13.10 hrs**
**ಆಕಾಶವಾಣಿ, ಬೆಂಗಳೂರು**
**ರಾಷ್ಟ್ರೀಯ ವಾರ್ತೆಗಳು**
**03.02.2025 / 13.10 hrs**

**<><*<><>*><>**

**ಮುಖ್ಯಾಂಶಗಳು**

೧. ಉಭಯ ಸದನಗಳಲ್ಲಿಂದು ಪ್ರತಿಪಕ್ಷಗಳಿಂದ ಕುಂಭಮೇಳ ಘಟನೆ ಕುರಿತು ಚರ್ಚೆ ಆಗ್ರಹಿಸಿ ಸಭಾತ್ಯಾಗ

೨. ಇಸ್ರೋದ ಉಡಾಯಿಸಿದ ೧೦೦ನೇ ಉಪಗ್ರಹದ ಕಾರ್ಯಾಚರಣೆ ವೇಳೆ ತಾಂತ್ರಿಕ ದೋಷ

೩. ದೆಹಲಿ ವಿಧಾನಸಭಾ ಚುನಾವಣೆ ; ಬಹಿರಂಗ ಪ್ರಚಾರದ ಕೊನೆಯ ದಿನವಾದ ಇಂದು ವಿವಿಧ ಪಕ್ಷಗಳಿಂದ ಬಿರುಸಿನ ಪ್ರಚಾರ

೪. ವಸಂತ ಪಂಚಮಿ ಹಿನ್ನೆಲೆ ಪ್ರಯಾಗ್‌ರಾಜ್‌ನ ಮಹಾಕುಂಭಮೇಳಕ್ಕೆ ಹರಿದು ಬಂದ ಭಕ್ತ ಸಮೂಹ

೫. ಟಾಟಾ ಸ್ಟೀಲ್ ಮಾಸ್ಟರ್ಸ್ ಚೆಸ್ ಟೂರ್ನಿ ಪ್ರಶಸ್ತಿ ಮುಡಿಗೇರಿಸಿಕೊಂಡ ಗ್ರ್ಯಾಂಡ್ ಮಾಸ್ಟರ್ ಆರ್. ಪ್ರಜ್ಞಾನಂದ

**<><*<><>*><>**

ಸಂಸತ್ತಿನ ಉಭಯ ಸದನಗಳಲ್ಲಿಂದು ಮಹಾಕುಂಭಮೇಳ ಘಟನೆ ಕುರಿತಂತೆ ಚರ್ಚಿಸಲು ಒತ್ತಾಯಿಸಿ ಪ್ರತಿಪಕ್ಷಗಳ ಪ್ರತಿಭಟನೆ ನಡುವೆ, ಕಲಾಪಗಳು ಪುನರಾರಂಭಗೊಂಡಿವೆ. ಲೋಕಸಭೆಯಲ್ಲಿಂದು ಬೆಳಗ್ಗೆ ಸದನ ಸೇರಿದಾಗ ಪ್ರತಿಪಕ್ಷಗಳು ಪ್ರಯಾಗ್‌ರಾಜ್‌ನ ಮಹಾಕುಂಭಮೇಳವನ್ನು ಅಸಮರ್ಪಕವಾಗಿ ನಿರ್ವಹಿಸಲಗುತ್ತಿದೆ ಎಂದು ಆರೋಪಿಸಿ ಪ್ರತಿಪಕ್ಷಗಳು ಘೋಷಣೆಗಳನ್ನು ಕೂಗಿದರು. ಈ ವೇಳೆ ಲೋಕಸಭಾ ಅಧ್ಯಕ್ಷ ಓಂ ಬಿರ್ಲಾ, ರಾಷ್ಟ್ರಪತಿ ದ್ರೌಪದಿ ಮುರ್ಮು, ಜಂಟಿ ಸದನವನ್ನುದ್ದೇಶಿಸಿ ಮಾಡಿದ ಭಾಷಣದಲ್ಲಿ ಮಹಾಕುಂಭಮೇಳದ ಘಟನೆ ಕುರಿತು ಪ್ರಸ್ತಾಪಿಸಿದ್ದಾರೆ. ಆದ್ದರಿಂದ ಈ ಕುರಿತಂತೆ ಸದಸ್ಯರು ತಮ್ಮ ಅನಿಸಿಕೆ ಅಭಿಪ್ರಾಯಗಳನ್ನು

ರಾಷ್ಟ್ರಪತಿಯವರ ಭಾಷಣದ ಮೇಲಿನ ವಂದನಾ ನಿರ್ಣಯ ಮೇಲಿನ ಚರ್ಚೆಯ ವೇಳೆ ವ್ಯಕ್ತಪಡಿಸಬಹುದು ಎಂದರು. ಇದೇ ವೇಳೆ ಸದನದ ಘನತೆಯನ್ನು ಎತ್ತಿ ಹಿಡಿದು ಸುಗಮ ಕಲಾಪ ನಡೆಸಲು ಅನುವು ಮಾಡಿಕೊಡುವಂತೆ ಸದಸ್ಯರೆಲ್ಲರಲ್ಲೂ ಓಂ ಬಿರ್ಲಾ ಮನವಿ ಮಾಡಿದರು. ಬಳಿಕ ಪ್ರಶ್ನೋತ್ತರ ಕಲಾಪ ಕೈಗೆತ್ತಿಕೊಳ್ಳಲಾಯಿತು. ಈ ವೇಳೆ, ಪ್ರಶ್ನೋತ್ತರ ಕಲಾಪವನ್ನು ಸುಗಮವಾಗಿ ನಡೆಸಲು ಸಹಕರಿಸುವಂತೆ ಪ್ರತಿಭಟನಾ ನಿರತ ಪ್ರತಿಪಕ್ಷಗಳಲ್ಲಿ ಮನವಿ ಮಾಡಿದರು. ಬಳಿಕ ಕಾಂಗ್ರೆಸ್, ಡಿಎಂಕೆ ಸಮಾಜವಾದಿ ಪಕ್ಷ, ಟಿಎಂಸಿ, ಮತ್ತು ಇತರ ಪ್ರತಿಪಕ್ಷಗಳು ಪ್ರತಿಭಟನೆ ಮುಂದುವರೆಸಿ, ಪ್ರಶ್ನೋತ್ತರ ಕಲಾಪದ ಮಧ್ಯದಲ್ಲಿ ಸದನದಿಂದ ಹೊರ ನಡೆದರು. ರಾಜ್ಯಸಭೆಯಲ್ಲೂ ಪ್ರತಿಪಕ್ಷಗಳು ಮಹಾಕುಂಭ ಮತ್ತು ಇತರ ಸಂಬಂಧಿತ ವಿಷಯಗಳ ಕುರಿತು ಘೋಷಣೆ ಕೂಗಿದರು. ಸಭಾಪತಿ ಜಗದೀಪ್ ಧನ್‌ಕರ್, ಪ್ರತಿಪಕ್ಷಗಳು ಕಲಾಪ ಮುಂದೂಡಿಕೆ ಕುರಿತಂತೆ ಸಲ್ಲಿಸಿದ್ದ ನೋಟಿಸ್‌ಗಳನ್ನು ತಿರಸ್ಕರಿಸಿದರು. ಬಳಿಕ ಪ್ರತಿಪಕ್ಷಗಳು ಸದನದಿಂದ ಹೊರ ನಡೆದರು.

<><*<><>*><>

ಲೋಕಸಭೆಯಲ್ಲಿಂದು ಸಹಕಾರ ಖಾತೆ ರಾಜ್ಯ ಸಚಿವ ಕಿಶನ್‌ಪಾಲ್ ಗುರ್ಜರ್ ತ್ರಿಭುವನ್ ಸಹಕಾರಿ ವಿಶ್ವ ವಿದ್ಯಾಲಯ ಮಸೂದೆ - ೨೦೨೫ ಅನ್ನು ಮಂಡಿಸಿದರು. ಈ ಮಸೂದೆ ತ್ರಿಭುವನ್ ಸಹಕಾರಿ ವಿಶ್ವವಿದ್ಯಾಲಯ ಎಂದು ಕರೆಯಲ್ಪಡಲಿರುವ ಇನ್ಸ್ಟಿಟ್ಯೂಟ್ ಆಫ್ ರೂರಲ್ ಮ್ಯಾನೆಜ್‌ಮೆಂಟ್ - ಆನಂದ್ ಸ್ಥಾಪನೆ ಮತ್ತು ಅದನ್ನು ರಾಷ್ಟ್ರೀಯ ಪ್ರಮುಖ್ಯತೆಯ ಸಂಸ್ಥೆ ಎಂದು ಘೋಷಿಸುವ ಗುರಿ ಹೊಂದಿದೆ. ಈ ಸಂಸ್ಥೆ ಸಹಕಾರ ವಲಯದಲ್ಲಿ ತಾಂತ್ರಿಕ ಶಿಕ್ಷಣ ಮತ್ತು ತರಬೇತಿಯನ್ನು ನೀಡಲಿದ್ದು, ಸಹಕಾರ ವಲಯದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಯನ್ನು ಪ್ರೋತ್ಸಾಹಿಸಲಿದೆ. ಆ ಮೂಲಕ ಜಾಗತಿಕ ಮಟ್ಟದ ಮಾನದಂಡಗಳನ್ನು ಸಾಧಿಸಿ, 'ಸಹಕಾರ್ ಸೆ ಸಮೃದ್ಧಿ' ಪರಿಕಲ್ಪನೆಯ ಸಾಕಾರದ ಗುರಿಹೊಂದಿದೆ.

<><*<><>*><>

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಇಸ್ರೋ, ತನ್ನ ಎನ್‌ವಿಎಸ್ ೦೨ ಉಪಗ್ರಹವನ್ನು ನಿನ್ನೆ ಕಕ್ಷೆಗೆ ಮುನ್ನಡೆಸುವ ಪ್ರಕ್ರಿಯೆ ನಡೆಸುತ್ತಿರುವಾಗ ತಾಂತ್ರಿಕ ದೋಷ ಎದುರಿಸಿದೆ ಎಂದು ತಿಳಿಸಿದೆ. ಈ ಕುರಿತು ಸಾಮಾಜಿಕ ಮಾಧ್ಯಮ ಪೋಸ್ಟ್ ನಲ್ಲಿ ಮಾಹಿತಿ ಹಂಚಿಕೊಂಡಿರುವ ಇಸ್ರೋ, ಬಾಹ್ಯಾಕಾಶ ನೌಕೆಯಲ್ಲಿರುವ ಥ್ರಸ್ಟರ್‌ಗಳನ್ನು ಹಾರಿಸಲು ಆಕ್ಸಿಡೈಸರ್ ಅನ್ನು ಪ್ರವೇಶಿಸುವ ಕವಾಟಗಳು ತೆರೆಯದ ಕಾರಣ ಉಪಗ್ರಹವನ್ನು ನಿಗದಿತ ಕಕ್ಷೆಯ ಸ್ಥಳದಲ್ಲಿ ಇರಿಸುವ 'ಕಕ್ಷೆಗೇರಿಸುವ

ಕಾರ್ಯಾಚರಣೆ'ಯನ್ನು ಕೈಗೊಳ್ಳಲು ಸಾಧ್ಯವಾಗಲಿಲ್ಲ. ಆದಾಗ್ಯೂ, ಕರ್ನಾಟಕದ ಹಾಸನದಲ್ಲಿರುವ ಉಪಗ್ರಹ ಮೇಲ್ವಿಚಾರಣಾ ಕೇಂದ್ರ ಉಪಗ್ರಹವನ್ನು ದೂರದಿಂದಲೇ ಮೇಲ್ವಿಚಾರಣೆ ಮಾಡುತ್ತಿದೆ ಮತ್ತು ಅದರ ವ್ಯವಸ್ಥೆಗಳು ಉತ್ತಮವಾಗಿವೆ ಎಂದು ತಿಳಿಸಿದೆ. ಉಪಗ್ರಹವನ್ನು ಕ್ರಿಯಾತ್ಮಕಗೊಳಿಸಲು ಪರ್ಯಾಯ ತಂತ್ರಗಳನ್ನು ರೂಪಿಸಲಾಗುತ್ತಿದ್ದು, ಅದರ ಸೌರ ಫಲಕಗಳನ್ನು ಯಶಸ್ವಿಯಾಗಿ ನಿಯೋಜಿಸಲಾಗಿದೆ ಎಂದು ಇಸ್ರೋ ತಿಳಿಸಿದೆ. ಜನವರಿ ೨೯ ರಂದು ಜಿ.ಎಸ್.ಎಲ್.ವಿ., ಎಫ್-೧೫ನೇ ರಾಕೆಟ್, ಎನ್.ವಿ.ಎಸ್ ೦೨ ಉಪಗ್ರಹವನ್ನು ಜಿಯೋಸಿಂಕ್ರೋನಸ್ ವರ್ಗಾವಣೆ ಕಕ್ಷೆಗೆ ಯಶಸ್ವಿಯಾಗಿ ಸೇರಿಸಿತ್ತು.

<><*<><>*><>

ದೆಹಲಿ ವಿಧಾನಸಭಾ ಚುನಾವಣೆ ಬಹಿರಂಗ ಪ್ರಚಾರಕ್ಕೆ ಇಂದು ಕೊನೆಯ ದಿನವಾಗಿದೆ. ಬಿಜೆಪಿ, ಕಾಂಗ್ರೆಸ್, ಆಮ್ ಆದ್ಮಿ ಪಕ್ಷಗಳ ನಾಯಕರು ಹಾಗೂ ತಾರಾ ಪ್ರಚಾರಕರು ರೋಡ್ ಶೋ, ಮನೆ ಮನೆ ಪ್ರಚಾರ ಮತ್ತು ಸಾರ್ವಜನಿಕ ಸಭೆಗಳ ಮೂಲಕ ಮತದಾರರ ಮನವೊಲಿಕೆಗೆ ಸರ್ವ ಪ್ರಯತ್ನದಲ್ಲಿ ತೊಡಗಿದ್ದಾರೆ.

ಈ ಕುರಿತು ಒಂದು ವರದಿ

ಇಂದು ಬುರಾರಿ ಪ್ರದೇಶದಲ್ಲಿ ಬಿಜೆಪಿ ರಾಷ್ಟ್ರೀಯಾಧ್ಯಕ್ಷ ಜೆ.ಪಿ. ನಡ್ಡಾ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಲಿದ್ದು, ಕೇಂದ್ರ ಗೃಹ ಸಚಿವ ಅಮಿತ್ ಶಾ, ವಿವಿಧ ವಿಧಾನಸಭಾ ಕ್ಷೇತ್ರಗಳಲ್ಲಿ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಲಿದ್ದಾರೆ. ಆಮ್ ಆದ್ಮಿ ಪಕ್ಷದ ರಾಷ್ಟ್ರೀಯ ಸಂಚಾಲಕ ಅರವಿಂದ್ ಕೇಜ್ರಿವಾಲ್ ಸಾರ್ವಜನಿಕ ಸಭೆ ಮತ್ತು ರೋಡ್ ಶೋ ಕೈಗೊಳ್ಳಲಿದ್ದರೆ, ಪಕ್ಷದ ಹಿರಿಯ ನಾಯಕ ಹಾಗೂ ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್, ಕೂಡ ಹಲವು ಸಾರ್ವಜನಿಕ ಸಭೆಗಳಲ್ಲಿ ಪಾಲ್ಗೊಳ್ಳಲಿದ್ದಾರೆ. ಕಾಂಗ್ರೆಸ್ ಸಂಸದೆ ಪ್ರಿಯಾಂಕ ಗಾಂಧಿ, ಕಸ್ತೂರ್‌ಬಾ ನಗರ್ ಪ್ರದೇಶದಲ್ಲಿ ರೋಡ್ ಶೋ ನಡೆಸಿ ಮತದಾರರನ್ನು ಸೆಳೆಯಲು ಪ್ರಯತ್ನಿಸಲಿದ್ದಾರೆ. ೭೦ ಸದಸ್ಯ ಬಲದ ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ೬೯೯ ಅಭ್ಯರ್ಥಿಗಳು ಕಣದಲ್ಲಿದ್ದಾರೆ. ನಾಡಿದ್ದು, ಇದೇ ೫ ರಂದು ಮತದಾನ ನಡೆಯಲಿದೆ. ಇದೇ ೮ ರಂದು ಮತ ಒಂದು ಕೋಟಿ ೫೬ ಲಕ್ಷಕ್ಕೂ ಹೆಚ್ಚಿನ ಮತದಾರರು ತಮ್ಮ ಹಕ್ಕು ಚಲಾಯಿಸಲಿದ್ದು, ಅಭ್ಯರ್ಥಿಗಳ ಚುನಾವಣಾ ಭವಿಷ್ಯ ನಿರ್ಧರಿಸಲಿದ್ದಾರೆ. ರಾಷ್ಟ್ರ ರಾಜಧಾನಿಯಲ್ಲಿ ೧೩ ಸಾವಿರದ ೭೬೦ ಮತಗಟ್ಟೆಗಳಲ್ಲಿ ಮತದಾನಕ್ಕೆ ಅವಕಾಶ ಕಲ್ಪಿಸಲಾಗಿದೆ. ಮತದಾರ ಸ್ನೇಹಿ ಚುನಾವಣೆಗಾಗಿ ಚುನಾವಣಾ ಆಯೋಗ ಎಲ್ಲ ಅಗತ್ಯ ಕ್ರಮಗಳನ್ನು ಕೈಗೊಂಡಿದೆ. ಸುಗಮ ಹಾಗೂ ತ್ವರಿತ ಮತದಾನ ಅನುಭವಕ್ಕಾಗಿ ಸರತಿ ನಿರ್ವಹಣಾ ಪರಿಹಾರ - ಕ್ಯೂಎಂಎಸ್

ಆಪ್ ಬಿಡುಗಡೆ ಗೊಳಿಸಲಾಗಿದೆ. ಭದ್ರತೆಯನ್ನು ಖಚಿತಪಡಿಸಿಕೊಳ್ಳಲು ೩೫ ಸಾವಿರಕ್ಕೂ ಹೆಚ್ಚಿನ ದೆಹಲಿ ಪೊಲೀಸ್ ಸಿಬ್ಬಂದಿ ೧೯ ಸಾವಿರ ಹೋಂಗಾರ್ಡ್ಸ್, ೨೨೦ ಸಿಎಪಿಎಫ್ ತುಕಡಿಗಳನ್ನು ಚುನಾವಣಾ ದಿನದಂದು ನಿಯೋಜಿಸಲಾಗುತ್ತಿದೆ.  ದೆಹಲಿ ವಿಧಾನಸಭಾ ಚುನಾವಣೆ ಮತ್ತು ಉತ್ತರಪ್ರದೇಶ ಹಾಗೂ ತಮಿಳುನಾಡಿನಲ್ಲಿ ತಲಾ ೧ ಕ್ಷೇತ್ರಗಳಿಗೆ ನಡೆಯಲಿರುವ ಉಪಚುನಾವಣೆಗಳ ಮತದಾನದ ದಿನಗಳಂದು ಬೆಳಗ್ಗೆ ೭ ರಿಂದ ಸಂಜೆ ೬.೩೦ರವರೆಗೆ ಚುನಾವಣೊತ್ತರ ಸಮೀಕ್ಷೆಗಳ ಮೇಲೆ ಭಾರತೀಯ ಚುನಾವಣಾ ಆಯೋಗ ನಿರ್ಬಂಧ ಏರಿದೆ. ಈ ಕುರಿತಂತೆ ಟಿ.ವಿ. ಚಾನೆಲ್‌ಗಳು, ರೇಡಿಯೋ ಕೇಂದ್ರಗಳು ಮತ್ತು ಸುದ್ದಿ ಸಂಸ್ಥೆಗಳು ಸೇರಿದಂತೆ ಎಲ್ಲ ಮಾಧ್ಯಮಗಳು ಇದನ್ನು ಪಾಲಿಸಬೇಕು ಎಂದು ಆಯೋಗ ಸೂಚಿಸಿದೆ.

<><*<><>*><>

ಪ್ರಯಾಗ್‌ರಾಜ್‌ನಲ್ಲಿ ನಡೆಯತ್ತಿರುವ ಮಹಾಕುಂಭ ಮೇಳಕ್ಕೆ ಜನ ಸಾಗರವೇ ಹರಿದು ಬರುತ್ತಿದೆ. ವಸಂತ ಪಂಚಮಿಯ ಈ ದಿನದಂದು, ಅಮೃತ ಸ್ನಾನ ನಡೆಯುತ್ತಿದ್ದು, ಲಕ್ಷಾಂತರ ಭಕ್ತರು ಗಂಗಾ, ಯುಮುನಾ, ಸರಸ್ವತಿಯ ತ್ರಿವೇಣಿ ಸಂಗಮದಲ್ಲಿ ಪುಣ್ಯ ಸ್ನಾನ ಮಾಡುತ್ತಿದ್ದಾರೆ. ಮೊದಲೆರಡು ಅಮೃತ ಸ್ನಾನಗಳು ಮಕರ ಸಂಕ್ರಾಂತಿ ದಿನವಾದ ಜನವರಿ ೧೪ ರಂದು ಮತ್ತು ಮೌನಿ ಅಮಾವಸ್ಯೆಯ ದಿನವಾದ ಜನವರಿ ೨೯ ರಂದು ನಡೆದವು. ಉತ್ತರಪ್ರದೇಶ ಸರ್ಕಾರ ಕುಂಭಮೇಳ ಪ್ರದೇಶದಲ್ಲಿ ಸದೃಢ ಭದ್ರತಾ ವ್ಯವಸ್ಥೆ ಕಲ್ಪಿಸಿದ್ದು, ಆ ಪ್ರದೇಶವನ್ನು ಈಗಾಗಲೇ ವಾಹನ ಮುಕ್ತ ಹಾಗೂ ವಿಐಪಿ ಮುಕ್ತ ಪ್ರದೇಶವೆಂದು ಘೋಷಿಸಿದೆ.  ಜಗತ್ತಿನ ಅತಿದೊಡ್ಡ ಧಾರ್ಮಿಕ ಉತ್ಸವವಾಗಿ ಮಹಾಕುಂಭಮೇಳ ಜನವರಿ ೧೩ ರಂದು ಆರಂಭವಾಗಿದ್ದು, ಇಲ್ಲಿಯವರೆಗೆ ೩೫ ಕೋಟಿಗೂ ಅಧಿಕ ಭಕ್ತಾದಿಗಳು ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ಕೈಗೊಂಡಿದೆ.

<><*<><>*><>

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಕೆನಡಾ, ಚೀನಾ, ಮೆಕ್ಸಿಕೊದಿಂದ ಆಮದು ಮಾಡಿಕೊಳ್ಳುವ ವಸ್ತುಗಳ ಮೇಲೆ ಹೆಚ್ಚುವರಿ ಸುಂಕ ವಿಧಿಸಿದ ಬೆನ್ನಲ್ಲೆ ಕೆನಡಾ ಬಳಿಕ ಮೆಕ್ಸಿಕೊ, ಅಮೆರಿಕ ಮೇಲೆ ಸುಂಕ ವಿಧಿಸುವುದಾಗಿ ಘೋಷಿಸಿದೆ. ಮೊದಲಿಗೆ ಕೆನಡಾ ಅಮೆರಿಕದಿಂದ ಆಮದು ಮಾಡಿಕೊಳ್ಳುವ ೩೦ ಬಿಲಿಯನ್ ಡಾಲರ್ ಮೌಲ್ಯದ ಸರಕುಗಳ ಮೇಲೆ ಶೇಕಡ ೨೫ರಷ್ಟು ಸುಂಕ ವಿಧಿಸಿದ ಈ ನಿರ್ಬಂಧಗಳು ನಾಳೆಯಿಂದ ಜಾರಿಗೆ ಬರಲಿದೆ. ಈ ಕುರಿತಂತೆ ೨ನೇ ಪಟ್ಟಿಯನ್ನು ಸಾರ್ವಜನಿಕ ಸಮಾಲೋಚನೆ ನಂತರ ಬಿಡುಗಡೆಗೊಳಿಸಲಾಗುವುದು. ಇದರಲ್ಲಿ ವಾಹನಗಳು, ಟ್ರಕ್, ಉಕ್ಕು ಮತ್ತು ಅಲ್ಯೂಮಿನಿಯಂ ಉತ್ಪನ್ನಗಳು ನಿರ್ಧಿಷ್ಟ ಹಣ್ಣು ಮತ್ತು ತರಕಾರಿಗಳು, ಗೋಮಾಂಸ, ಹಂದಿ

ಮಾಂಸ, ಡೈರಿ ಉತ್ಪನ್ನಗಳು ಸೇರಿರಲಿವೆ ಎಂದು ನಮ್ಮ ಬಾತ್ಮೀದಾರರು ವರದಿ ಮಾಡಿದ್ದಾರೆ. ಈ ಬೆಳವಣಿಗೆಯ ನಡುವೆ ಕೆನಡಾ ಪ್ರಧಾನಮಂತ್ರಿ ಕಾರ್ಯಾಲಯದಿಂದ ಹೇಳಿಕೆ ಬಿಡುಗಡೆಗೊಳಿಸಲಾಗಿದ್ದು, ಕೆನಡಾ ಮತ್ತು ಮೆಕ್ಸಿಕೋ ನಡುವಿನ ದ್ವಿಪಕ್ಷೀಯ ಸಂಬಂಧವನ್ನು ಹೊಸ ಎತ್ತರಕ್ಕೆ ಕೊಂಡೊಯ್ಯಲು ಉಭಯ ರಾಷ್ಟ್ರಗಳು ಒಮ್ಮತ ವ್ಯಕ್ತಪಡಿಸಿವೆ ಎಂದು ತಿಳಿಸಲಾಗಿದೆ. ಕೆನಡಾ ಅತಿದೊಡ್ಡ ರಫ್ತು ಮಾರುಕಟ್ಟೆಯಾಗಿದ್ದರೆ ಮೆಕ್ಸಿಕೊ ಅಮೆರಿಕದ ಅತಿದೊಡ್ಡ ವ್ಯಾಪಾರ ಪಾಲುದಾರ ರಾಷ್ಟ್ರವಾಗಿದೆ.

<><*<><>*><>

ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದ ಅವರು ಪ್ರತಿಷ್ಠಿತ ಟಾಟಾ ಸ್ಟೀಲ್ ಮಾಸ್ಟರ್ಸ್ ೨೦೨೫ ಪ್ರಶಸ್ತಿಯನ್ನು ಗೆದ್ದಿದ್ದಾರೆ. ನಿನ್ನೆ ರಾತ್ರಿ ನೆದರ್‌ಲ್ಯಾಂಡ್ಸ್‌ನಲ್ಲಿ ನಡೆದ ಟೈ ಬ್ರೇಕರ್ ಪಂದ್ಯದಲ್ಲಿ ಪ್ರಜ್ಞಾನಂದ, ಹಾಲಿ ವಿಶ್ವ ಚಾಂಪಿಯನ್ ಡಿ. ಗುಕೇಶ್ ಅವರನ್ನು ಸೋಲಿಸಿದರು. ಈ ಗೆಲುವು ಆರ್. ಪ್ರಜ್ಞಾನಂದ ಅವರನ್ನು ೨೦೦೬ ರಲ್ಲಿ ವಿಶ್ವನಾಥನ್ ಆನಂದ್ ನಂತರ ಪ್ರತಿಷ್ಠಿತ ಪ್ರಶಸ್ತಿಯನ್ನು ಪಡೆದ ಮೊದಲ ಭಾರತೀಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿಸಿದೆ. ೧೪ ಆಟಗಾರರ ರೌಂಡ್-ರಾಬಿನ್ ಸುತ್ತಿನಲ್ಲಿ, ಗುಕೇಶ್ ಮತ್ತು ಪ್ರಜ್ಞಾನಂದ ಇಬ್ಬರೂ ೧೩ ಸುತ್ತುಗಳ ನಂತರ ೮.೫ ಅಂಕಗಳೊಂದಿಗೆ ಸಮಬಲ ಸಾಧಿಸಿದರು. ಪಂದ್ಯಾವಳಿಯಾದ್ಯಂತ ಅಜೇಯರಾಗಿದ್ದ ಗುಕೇಶ್, ಗ್ರ್ಯಾಂಡ್‌ಮಾಸ್ಟರ್ ಅರ್ಜುನ್ ಎರಿಗೈಸಿ ವಿರುದ್ಧ ತಮ್ಮ ಕೊನೆಯ ಕ್ಲಾಸಿಕಲ್ ಆಟವನ್ನು ಕಳೆದುಕೊಂಡರು, ಆದರೆ ಪ್ರಜ್ಞಾನಂದ ಅವರನ್ನು ದೀರ್ಘ ಹೋರಾಟದಲ್ಲಿ ವಿನ್ಸೆಂಟ್ ಕೀಮರ್ ಸೋಲಿಸಿದರು. ಟೈಬ್ರೇಕ್‌ನಲ್ಲಿ, ಗುಕೇಶ್ ಎರಡು ಬ್ಲಿಟ್ಜ್ ಪಂದ್ಯಗಳಲ್ಲಿ ಮೊದಲನೆಯದನ್ನು ಗೆದ್ದರು ಮತ್ತು ಪ್ರಶಸ್ತಿಯನ್ನು ಖಚಿತಪಡಿಸಿಕೊಳ್ಳಲು ಎರಡನೇ ಪಂದ್ಯದಲ್ಲಿ ಕೇವಲ ಡ್ರಾ ಅಗತ್ಯವಿತ್ತು. ಆದಾಗ್ಯೂ, ಪ್ರಾಗ್ ಅದ್ಭುತ ಪುನರಾಗಮನವನ್ನು ಪ್ರದರ್ಶಿಸಿದರು, ಎರಡೂ ಬ್ಲಿಟ್ಜ್ ಪಂದ್ಯಗಳನ್ನು ಗೆಲ್ಲುವ ಮೂಲಕ ಚೆಂಪಿಯನ್ ಆದರು.

<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>

<><*<>ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೨.೩೦ ಕ್ಕೆ <>*><>